ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಎಚ್. ಡಿ. ಚೌಡಯ್ಯ.—ಪರಿಶೀಲಿಸುವುದು ಎಂದರೆ ಏನು ಸ್ವಾಮಿ? ಮಂಡ್ಯಾಜಿಲ್ಲಾ ಕೇಂದ್ರ ವಾಗಿದೆ, ನಾವು ಜಮೀನು ಕೊಡುತ್ತೇವೆಂದು ಹೇಳಿದರೂ ಸಹ ನಿಮ್ಮ ಅಧಿಕಾರಿಗಳು ಮುಂದೆ ಬರುತ್ತಿಲ್ಲ. ಒಂದಲ್ಲ ೧೦ ಕಾಗದಗಳನ್ನು ಇದರ ಬಗ್ಗೆ ಬರೆದಿದ್ದೇವೆ ನಿಮಗೂ ಕಾಗದ ಬರೆದಿದ್ದೇವೆ. ಜಿಲ್ಲಾಧಿಕಾರಿ ಗಳೂ ಸಹ ಇದರ ಬಗ್ಗೆ ಕಾಗದ ಬರೆದಿದ್ದಾರೆ. ಆದುದರಿಂದ ಇದರ ಬಗ್ಗೆ ತಾವು ಆಶ್ವಾಸನೆ ಕೊಡ ಬೇಕೆಂದು ಕೇಳಬಯಸುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈಗಲೇ ಅದರ ಬಗ್ಗೆ ಆಶ್ವಾಸನೆ ಕೊಡುವುದಕ್ಕೆ ಸಾಧ್ಯವಿಲ್ಲ ಸಹಾನುಭೂತಿಯಿಂದ ಪರಿಶೀಲಿಸುತ್ತೇನೆ.

ಶ್ರೀ ಎಚ್. ಡಿ. ಚೌಡಯ್ಯ.—ಹೀಗೆ ಹೇಳಿದರೆ ಹೇಗೆ ಸ್ವಾಮಿ, ನಾವು ಅಲ್ಲಿ ೪-೫ ಎಕರೆ ಜಮೀನು ಕೊಡಿಸುತ್ತೇವೆ ಇದರಲ್ಲಿ ಏನು ತೊಂದರೆ ಇದೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಮಾನ್ಯ ಸದಸ್ಯರ ಆತಂಕ ನನಗೆ ಗೊತ್ತಿದೆ. ಇದನ್ನು ಅಧಿ ಕಾರಿಗಳ ಜೊತೆಗೆ ಸಮಾಲೋಚನೆ ಮಾಡಿ ಆದಷ್ಟು ಬೇಗ ಇದರ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳು ತ್ತೇವೆ.

ಅಧ್ಯಕ್ಷರು.—ಶ್ರೀ ಬಿ. ವಿ. ರಾವಂಚಂದ್ರ ರೆಡ್ಡಿ ನಿಮ್ಮ ಪ್ರಶ್ನೆಯನ್ನು ಆಮೇಲೆ ತೆಗೆದು ಕೊಳ್ಳೋಣ, ಮಂತ್ರಿಗಳವರಿಗೆ ಹುಶಾರಿಲ್ಲ ಆದುದರಿಂದ ಇದನ್ನು ತಡೆಹಿಡಿಯಲಾಗಿದೆ.

ಶ್ರೀ ವಿ. ಮಸಿಯಪ್ಪ.—ಅಧ್ಯಕ್ಷರೇ, ನನ್ನದೊಂದು ಪ್ರಶ್ನೆ ಇದೆ ದಯವಿಟ್ಟು ಅವಕಾಶ ಮಾಡಿ ಕೊಡಬೇಕು. ನಾನು ಆಸ್ಪತ್ರೆಗೆ ಹೋಗಿದ್ದೆ ಬರುವುದು ಸ್ವಲ್ಪ ತಡವಾಯಿತು.

ಅಧ್ಯಕ್ಷರು.—ನಾನು ಎರಡು ಮೂರು ಸಾರಿ ನಿಮ್ಮ ಹೆಸರನ್ನು ಕರೆದೆ ತಾವು ಇರಲಿಲ್ಲ. ಕೇಳಿ.

Construction of General Hospital in Challakere Town.

9. SRI V. MASIYAPPA (Chitradurga).—Will the Minister for Health and Family Welfare be pleased to state:—

(*a*) when the Government sanctioned the estimates of plans for the construction of building for General Hospital in Challakere Town;

(*b*) when the work was started; and the stage at which it is held up and since how long ;

(*c*) whether the Government take action to complete the building early ?

SRI A. K. ABDUL SAMAD (Minister for Health and Family Welfare).—

(*a*) Sanctioned on 28-12-1977.

(*b*) During December 1978.

The Building work has come up to the roof level and further work is heldup since February 1980.

(*c*) Yes.

ಶ್ರೀ ವಿ. ಮಸಿಯಪ್ಪ.—ಚಳ್ಳಕೆರೆ ಬಹಳ ದೊಡ್ಡ ತಾಲ್ಲೂಕ್ ಅಲ್ಲಿದೆ ಬಹಳ ಜನ ರೋಗಿಗಳು ಬಂದು ಆಸ್ಪತ್ರೆಗೆ ಸೇರಬೇಕಾಗುತ್ತದೆ. ಈಗ ಅಲ್ಲಿ ಏನು ಆಸ್ಪತ್ರೆಯನ್ನು ಕಟ್ಟಿಸುತ್ತಿದ್ದೀರಿ ಅದು ಕೇವಲ ಸಿವೆಂಟ್ ಸಿಕ್ಕಿಲ್ಲ ಎನ್ನುತಕ್ಕ ಕಾರಣದಿಂದ ನಿಂತಿದೆ. ಆದುದರಿಂದ ಸಿವೆಂಟನ್ನು ಆದಷ್ಟು ಜಾಗ್ರತೆ ಒದಗಿಸಿ ಕೊಟ್ಟು ಆ ಕೆಲಸವನ್ನು ಆದಷ್ಟು ಬೇಗ ಮುಗಿಸುವುದಕ್ಕೆ ವ್ಯವಸ್ಥೆ ಮಾಡಿ ಅದರ ಪೂರ್ಣ ಫಲ ಜನತೆಗೆ ಸಿಕ್ಕುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

SRI A. K. ABDUL SAMAD.—I know that the work has remained stagnant for the last couple of months. I will see that by the end of March the entire work is completed.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

QUESTIONS FOR ANSWERS ON THE DAY
(but not taken up)

Strength of Bus Stands in Humnabad Taluk.

515. SRI BASAVARAJ PATIL (Humnabad).—Will the Minister for Transport and Minor Irrigation be pleased to state.—

(*a*) the number of bus stands in Humnabad taluk ;

(*b*) whether there is any proposal under consideration of Government for construction of new bus stands ;

(*c*) whether Government is aware that the Mannayakanahally of Humnabad taluk though centrally situated where there is no bus stand ;

(*d*) if so, the number of days required to complete this work ?

SRI M. M. J. SADYOJATHA (Minister for Transport and Minor Irrigation).—

(*a*) Three.

(*b*) Nil.

(*c*) Yes.

(*d*) Keeping the financial position in view the construction work will be taken up.

Taking over the T.D.B. Hospital Mundargi

651. SRI V. B. BHAVI (Mundargi).—Will the Minister for Health and Family Welfare be pleased to state:—

(*a*) whether the Government has issued a G.O. in respect of taking over the hospital of Mundargi, T.D.B. in Dharwar District ;

(*b*) if so, when the Government has issued G. O. taking over the T. D. B. Hospital, Mundargi ;

(*c*) whether T.D.B. Mudargi maintaining the Hospital ?